REDMI NOTE 8
AI QUAD CAMERA

ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ:ಕೆಐಸಿಪಿಎಸ್/ಕೋವಿಡ್–19/2020–21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು, ದಿನಾಂಕ:11.04.2020

ಗೆ,
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾಘಟಕ
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಬಾಲಮಂದಿರ, ವೀಕ್ಷಣಾಲಯ ಹಾಗೂ ವಿಶೇಷ ಗೃಹಗಳಲ್ಲಿನ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್–19 ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸರ್ಕಾರಿ ಬಾಲಮಂದಿರ, ವೀಕ್ಷಣಾಲಯ ಹಾಗೂ ವಿಶೇಷ ಗೃಹಗಳಲ್ಲಿನ ಮಕ್ಕಳನ್ನು ಸದಾ ಚಟುವಟಿಕೆಯಿಂದ ಹಾಗೂ ಲವಲವಿಕೆಯಿಂದ ಇರುವಂತೆ ನೋಡಿಕೊಳ್ಳುವುದು ತುಂಬಾ ಅವಶ್ಯಕವಾಗಿರುತ್ತದೆ. ಕೋವಿಡ್–19 ಬಗೆಗಿನ ಭಯ–ಆತಂಕ ಹೋಗಲಾಡಿಸಲು, ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಗುರುತಿಸಲು ಹಾಗೂ ಮಕ್ಕಳು ಹೊಸದಾಗಿ ಏನನ್ನಾದರೂ ಕಲಿಯಲು ಈಗ ಇರುವ ಸಮಯವನ್ನು ಸದುಪಯೋಗಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಎಲ್ಲ ಸಂಸ್ಥೆಗಳಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲು ನಿರ್ಧರಿಸಲಾಗಿದೆ.

ಮಕ್ಕಳಿಗಾಗಿ ಏರ್ಪಡಿಸುವ ಸ್ಪರ್ಧೆಗಳಿಗಾಗಿ ಪೂರ್ವಭಾವಿ ತಯಾರಿ ನಡೆಸುವುದು ಸಹ ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಪತ್ರಕ್ಕೆ ಲಗತ್ತಿಸಿರುವ ವೇಳಾಪಟ್ಟಿಯಂತೆ ಕಡ್ಡಾಯವಾಗಿ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿ ಸಂಸ್ಥೆಯಲ್ಲಿ ಪ್ರತಿ ವಿಭಾಗದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳಿಗಾಗಿ ವಿಜೇತರನ್ನು ಗುರುತಿಸಿ ಬಹುಮಾನ ನೀಡಲು ಕೋರಿದೆ. ಪ್ರತಿ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ವಿಜೇತರ ವಿವರಗಳನ್ನು ಅವರ ಬರಹ/ಚಿತ್ರ/ಶಾರ್ಟ್ ವೀಡಿಯೋ ಜೊತೆಗೆ ಮಾಹಿತಿಯನ್ನು ಪ್ರಧಾನ ಕಛೇರಿಗೆ ಕಳುಹಿಸುವುದು. ರಾಜ್ಯ ಮಟ್ಟದಲ್ಲಿ ಪ್ರತಿ ವಿಭಾಗದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ನೀಡಲಾಗುವುದು. ಸ್ಪರ್ಧೆಗೆ ಅವಶ್ಯವಿರುವ ಪರಿಕರಗಳನ್ನು ಸಂಸ್ಥೆಯ ದಾಸ್ತಾನುವಿನಲ್ಲಿ ಲಭ್ಯವಿದ್ದಲ್ಲಿ ಅದನ್ನು ಬಳಸುವಂತೆ ತಿಳಿಸುವುದು. ಲಭ್ಯವಿಲ್ಲದ್ದಲ್ಲಿ ಸಂಸ್ಥೆಯ ಅಧೀಕ್ಷರೊಡನೆ ಚರ್ಚಿಸಿ ಅವಶ್ಯವಿರುವಷ್ಟು ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಲು ಆರ್ಥಿಕ ಅಧಿಕಾರದನ್ವಯ ಅನುಮತಿಸಬಹುದು.

ಜಿಲ್ಲಾ ಮಟ್ಟದಲ್ಲಿ ಪ್ರಸ್ತುತ Lockdown ಪರಿಸ್ಥಿತಿ ಇರುವುದರಿಂದ ವಿಜೇತರಿಗೆ ಪ್ರಶಸ್ತಿ ಪತ್ರವನ್ನು ಮಾತ್ರ ನೀಡುವುದು. Lockdown ತೆರವುಗೊಂಡ ನಂತರ ವಿಜೇತರಿಗೆ ನೀಡಬೇಕಾದ ಬಹುಮಾನ ಕುರಿತು ಸೂಕ್ತ ನಿರ್ದೇಶನಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು. ಸ್ಪರ್ಧೆಗಳನ್ನು ನಡೆಸುವಾಗ ಹಾಗೂ

ಸ್ಪರ್ಧೆಗಳಿಗಾಗಿ ಮಕ್ಕಳಿಗೆ ತರಬೇತುಗೊಳಿಸುವಾಗ ಕಡ್ಡಾಯವಾಗಿ ಕೋವಿಡ್-19ಗೆ ಸಂಬಂಧಪಟ್ಟ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕಾಪಾಡಿಕೊಳ್ಳತಕ್ಕದ್ದು.

ಈ ಸ್ಪರ್ಧೆಗಳಿಗೆ ಸಂಬಂಧಪಟ್ಟಂತೆ ಪೂರ್ವಭಾವಿ ಕ್ರಮಗಳು, ಸ್ಪರ್ಧೆಗಳನ್ನು ನಡೆಸುವುದು, ಸ್ಪರ್ಧೆಗಳನ್ನು ನಡೆಸಿದ ನಂತರ ಅವಶ್ಯವಿರುವ ಆಯಾ ಕ್ರಮಗಳು ಹಾಗೂ ಈ ಎಲ್ಲಾ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ಕೋವಿಡ್-19ರ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಪಾಲಿಸುವಂತೆ ಮೇಲ್ವಿಚಾರಣೆ ಮಾಡುವುದು. ಈ ಪ್ರಕ್ರಿಯೆಗಳಲ್ಲಿ ಎಲ್ಲಾ ಜಿಲ್ಲೆಗಳಿಗೆ ಅವಶ್ಯಕ ಮಾರ್ಗದರ್ಶನ ನೀಡುವುದು ಹಾಗೂ ಕೇಂದ್ರ ಕಛೇರಿ ಮತ್ತು ಜಿಲ್ಲೆಗಳಿಗೆ ಸಮನ್ವಯ ಸಾಧಿಸುವುದು ಅವಶ್ಯಕವಾಗಿದ್ದು, ಈ ಉದ್ದೇಶಗಳಿಗೆ ಈ ಸ್ಪರ್ಧೆಗಳನ್ನು ಸುಸೂತ್ರವಾಗಿ ನಡೆಸಲು ಅನುವಾಗುವಂತೆ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ.

| ಕ್ರ.ಸಂ. | ಸದಸ್ಯರ ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀಮತಿ ನರ್ಮದಾ ಆನಂದ್ | 9480354409 |
| 2 | ಶ್ರೀಮತಿ ಶೈಲಜಾ ಎಂ.ಸಿ. | 9886474749 |
| 3 | ಶ್ರೀಮತಿ ಭಾರತಿದೇವಿ ಬಿ.ಎಸ್. | 9108377782 |
| 4 | ಶ್ರೀಮತಿ ಸುಜಾ, ಎನ್‌ಫೋಲ್ಡ್ ಸಂಸ್ಥೆ | 9008320666 |
| 5 | ಶ್ರೀ ಅಜಿತ್, ಯು ಅಂಡ್ ಐ ಸಂಸ್ಥೆ | 9886191810 |
| 6 | ಸುನಯನ, ಮಕ್ಕಳ ಜಾಗೃತಿ ಎನ್.ಜಿ.ಓ | 9742351264 |

ಮೇಲಿನ ಸಮಿತಿಯು ಕೋವಿಡ್-19ರ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಸ್ಪರ್ಧೆಗೆ ಸಂಬಂಧಪಟ್ಟ ಪ್ರತಿಯೊಂದು ಚಟುವಟಿಕೆಗಳಲ್ಲಿ ಸುಸೂತ್ರವಾಗಿ ಅನುಪಾಲನೆಯಾಗುವಂತೆ ಹಾಗೂ ಸ್ಪರ್ಧೆಗಳಿಗೆ ಸಂಬಂಧಪಟ್ಟ ಎಲ್ಲಾ ಅಂಶಗಳ ಬಗ್ಗೆ ಎಲ್ಲಾ ಜಿಲ್ಲೆಗಳಿಗೆ ಮಾರ್ಗದರ್ಶನ ನೀಡುವುದು.

ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲು ತೆಗೆದುಕೊಳ್ಳಬೇಕಾಗಿರುವ ಪೂರ್ವಭಾವಿ ಕ್ರಮಗಳು ಹಾಗೂ ವೇಳಾಪಟ್ಟಿ ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

11.04.2020

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾಯೋಜನೆ
ಬೆಂಗಳೂರು.

REDMI NOTE 8
AI QUAD CAMERA

# ಅನುಬಂಧ 1

## ಸ್ಪರ್ಧೆಗಳನ್ನು ಏರ್ಪಡಿಸಲು ತೆಗೆದುಕೊಳ್ಳಬೇಕಾಗಿರುವ ಪೂರ್ವಭಾವಿ ಕ್ರಮಗಳು

**ವಿಶೇಷ ಸೂಚನೆ :**

- ಸಂಸ್ಥೆಯಲ್ಲಿನ ಎಲ್ಲಾ ಮಕ್ಕಳು ಭಾಗವಹಿಸುವಂತೆ ಪ್ರೇರೇಪಿಸುವುದು. ಇದೊಂದು ಮನೋರಂಜನೆ ಕಾರ್ಯಕ್ರಮವಾಗಿರಬೇಕು
- ದಿನಕ್ಕೆ ಒಂದು ಸ್ಪರ್ಧೆಯನ್ನು ಏರ್ಪಡಿಸುವುದು
- ಸ್ಪರ್ಧೆಗೆ ಆಯ್ಕೆ ಮಾಡಿರುವ ವಿಷಯದ ಕುರಿತು ಮಕ್ಕಳಿಗೆ ಮೊದಲೇ ಮಾಹಿತಿ ನೀಡುವುದು. ಅವರುಗಳು ಯೋಚಿಸಲು, ಕಲ್ಪನೆ ಮಾಡಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆ.
- ಸ್ಪರ್ಧೆಯ ವೇಳೆಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಹಾಗೂ ಕೋವಿಡ್-19ಗೆ ಸಂಬಂಧಪಟ್ಟ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವುದು.
- ಸ್ಪರ್ಧೆಗೆ ಸಾಕಷ್ಟು ಸಮಯಾವಕಾಶ ನೀಡುವುದು.

1. ಮಕ್ಕಳ ಪಾಲನಾ ಸಂಸ್ಥೆಗಳ ಅಧೀಕ್ಷಕರು, ಗೃಹ ಮಾತೆ, ಗೃಹಪಾಲಕ, ವಿಷಯ ಪರಿಶೀಲಕರು ಹಾಗೂ ಸಮಾಲೋಚಕರು ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲು ಅಣಿಗೊಳಿಸಲು ಅವರಿಗೆ ಪೂರ್ವಭಾವಿಯಾಗಿ ಮಾಹಿತಿಯನ್ನು ನೀಡಲು ಹಾಗೂ ತರಬೇತಿಗೊಳಿಸಲು ಕ್ರಮವಹಿಸುವುದು.
2. ಅಧೀಕ್ಷಕರು ವಿವಿಧ ಸ್ಪರ್ಧೆಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಮಕ್ಕಳಿಗೆ ಸಕಾಲದಲ್ಲಿ ಒದಗಿಸಲು ಕ್ರಮವಹಿಸುವುದು.
3. ರಕ್ಷಣಾಧಿಕಾರಿ(ಸಾಂಸ್ಥಿಕ ಪೋಷಣೆ), ರಕ್ಷಣಾಧಿಕಾರಿ(ಅಸಾಂಸ್ಥಿಕ ಪೋಷಣೆ), ಕಾನೂನು ಪರಿವೀಕ್ಷಣಾಧಿಕಾರಿ, ಸಮಾಲೋಚಕರು, ಸಮಾಜ ಕಾರ್ಯಕರ್ತರು, ಹಾಗೂ ಔಟ್‌ರೀಚ್ ವರ್ಕರ್‌ರವರುಗಳನ್ನು ಮಕ್ಕಳಿಗಾಗಿ ಏರ್ಪಡಿಸುವ ಸ್ಪರ್ಧೆಗಳನ್ನು ಅರ್ಥಪೂರ್ಣವಾಗಿ ನಡೆಸಲು, ಮಕ್ಕಳಿಗೆ ಬೆಂಬಲ ನೀಡಲು ಹಾಗೂ ಮೇಲುಸ್ತುವಾರಿ ಮಾಡಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರು ನಿಯೋಜಿಸುವುದು.
4. ನಿಗಧಿಪಡಿಸಿದ ದಿನಾಂಕಗಳಂದು ಸ್ಪರ್ಧೆಗಳನ್ನು ಏರ್ಪಡಿಸಿ ಜಿಲ್ಲಾ ಮಟ್ಟದಲ್ಲಿಯೇ ಪ್ರತೀ ಸ್ಪರ್ಧೆಯಲ್ಲಿ ಬಾಲಕರಲ್ಲಿ ಪ್ರಥಮ, ದ್ವಿತೀಯ, ತೃತೀಯ ಹಾಗೂ ಬಾಲಕಿಯರಲ್ಲಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ಆಯಾ ಏಜ್ ಗ್ರೂಪ್‌ನಲ್ಲಿ ಪ್ರತ್ಯೇಕವಾಗಿ ವಿಜೇತರನ್ನು ಆಯ್ಕೆ ಮಾಡುವುದು. ಇದಕ್ಕಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರು ತೀರ್ಪುಗಾರರನ್ನು ಒದಗಿಸಿಕೊಡಲು ಕ್ರಮವಹಿಸುವುದು.
5. ಜಿಲ್ಲೆಯಲ್ಲಿ ಪ್ರತೀ ಸ್ಪರ್ಧೆಯಲ್ಲಿ ಹಾಗೂ ಪ್ರತೀ ಏಜ್ ಗ್ರೂಪ್‌ನಲ್ಲಿ ಪ್ರಥಮ ಬಹುಮಾನ ಪಡೆದ ಬಾಲಕರ ಹಾಗೂ ಬಾಲಕಿಯರ ವಿವರಗಳನ್ನು ಅವರ ರಚನೆಯ ಜೊತೆಗೆ ಪೇಂಟಿಂಗ್, ಕಥೆ, ಕವನ ಇತ್ಯಾದಿ ಹಾಗೂ Short video ಜೊತೆಗೆ ಪ್ರಧಾನ ಕಛೇರಿಗೆ ಇ-ಮೇಲ್ ಮುಖಾಂತರ ಸಲ್ಲಿಸುವುದು. (Email ID: kar.icps.children.competition@gmail.com)
6. ಯಾವುದೇ ಒಂದು ಜಿಲ್ಲೆಯಲ್ಲಿ ಯಾವುದೇ ಒಂದು ಸ್ಪರ್ಧೆಗೆ ಪ್ರಸ್ತಾಪಿಸಿದ ಏಜ್‌ಗ್ರೂಪ್‌ನಲ್ಲಿ ಬಾಲಕ ಅಥವಾ ಬಾಲಕಿಯರಲ್ಲಿ ಭಾಗವಹಿಸಲು ಯಾರೂ ಮಕ್ಕಳು ಇಲ್ಲದೇ ಇದ್ದಲ್ಲಿ ಈ ಬಗ್ಗೆ ಸದರಿ ಸ್ಪರ್ಧೆ, ಏಜ್ ಗ್ರೂಪ್, ಸದರಿ ಲಿಂಗಕ್ಕೆ ಸಂಬಂಧಪಟ್ಟಂತೆ ಭಾಗವಹಿಸಲು ಯಾರೂ ನಿವಾಸಿಗಳು ಇಲ್ಲವೆಂಬ ಮಾಹಿತಿಯನ್ನು ಮೇಲೆ ತಿಳಿಸಿದ ಇ-ಮೇಲ್ ಮುಖಾಂತರ ಸಲ್ಲಿಸುವುದು.

11.04.2020

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾಯೋಜನೆ
ಬೆಂಗಳೂರು.

## ಅನುಬಂಧ 2

## ಕಾರ್ಯಕ್ರಮ ವೇಳಾ ಪಟ್ಟಿ

| ಕ್ರಸಂ | ಸ್ಪರ್ಧೆಗಳ ಹೆಸರು | ದಿನಾಂಕ | ವಯೋವಾರು ಮಕ್ಕಳ ಗುಂಪು |
|---|---|---|---|
| 1 | ಹಾಳೆಯ ಮೇಲೆ ರಂಗೋಲಿಯನ್ನು ಚಿತ್ರ ಪೆನ್ಸಿಲ್‌ನಿಂದ ಬಿಡಿಸಿ ಬಣ್ಣ ತುಂಬುವುದು | 15/04/2020 | 6 ರಿಂದ 12ವರ್ಷ |
| | | | 13 ರಿಂದ 18ವರ್ಷ |
| 2 | ಹಾಳೆಯ ಮೇಲೆ ಚಿತ್ರ ಬಿಡಿಸಿ ಬಣ್ಣ ತುಂಬುವುದು (Theme:- ಪ್ರಾಣಿಗಳು/ ಪಕ್ಷಿಗಳು ) | 17/04/2020 | 6 ರಿಂದ 12ವರ್ಷ |
| | ಹಾಳೆಯ ಮೇಲೆ ಚಿತ್ರ ಬಿಡಿಸಿ ಬಣ್ಣತುಂಬುವುದು (Theme:- ಪ್ರಕೃತಿ (Nature ) | | 13 ರಿಂದ 18ವರ್ಷ |
| 3 | ಕೋವಿಡ್-19 ವಿರುದ್ಧದ ಹೋರಾಟ ಕುರಿತು ಭಾಷಣ.(2 ನಿಮಿಷ) | 19/04/2020 | 6 ರಿಂದ 12ವರ್ಷ |
| | | | 13 ರಿಂದ 18ವರ್ಷ |
| 4 | Pick and Act ( ವಿಷಯ: ನಗುವುದು, ಕಪ್ಪೆ ತರಹ ಜಿಗಿಯುವುದು, ಜೋಕರ್, ನೃತ್ಯ, ವೈದ್ಯ, ಶಿಕ್ಷಕ, ಅಡುಗೆಯವರು, ಬಸ್ ಡ್ರೈವರ್, ಬಸ್ ಕಂಡಕ್ಟರ್) | 21/04/2020 | 6 ರಿಂದ 12ವರ್ಷ |
| | Pick and speak (ವಿಷಯ: ಪರಿಸರ ರಕ್ಷಣೆ, ಆರೋಗ್ಯ ಮತ್ತು ನೈರ್ಮಲ್ಯ, ನಮ್ಮೂರ ಜಾತ್ರೆ, ನನ್ನ ಶಾಲೆ, ನನ್ನ ಸ್ನೇಹಿತರು, ನಾನು ಮೆಚ್ಚಿದ ಟೀಚರ್, ಮಳೆಗಾಲ, ಹಬ್ಬಗಳು ಹಾಗೂ ಸ್ವತಂತ್ರ್ಯ ಹೋರಾಟ) (2 ನಿಮಿಷ) | | 13 ರಿಂದ 18ವರ್ಷ |
| 5 | ಗಾದೆ ಮಾತುಗಳನ್ನು ಹೇಳುವುದು (5 ನಿಮಿಷ) | 23/04/2020 | 6 ರಿಂದ 12ವರ್ಷ |
| | | | 13 ರಿಂದ 18ವರ್ಷ |
| 6 | ಬಸವಣ್ಣ/ ಅಕ್ಕಮಹಾದೇವಿ/ ಸರ್ವಜ್ಞ ಮುಂತಾದವರು ಬರೆದಿರುವ ವಚನಗಳನ್ನು ಹೇಳುವುದು (5 ನಿಮಿಷ) | 24/04/2020 | 6 ರಿಂದ 12ವರ್ಷ |
| | | | 13 ರಿಂದ 18ವರ್ಷ |
| 7 | ನೀಡಿರುವ ಪದಗಳನ್ನು ಬಳಸಿ ಒಂದು ಪುಟ ಕಾಲ್ಪನಿಕ ಕಥೆ ಬರೆಯುವುದು – ಜಾತ್ರೆ, ಸರ-ಬಳೆ, ಗೊಂಬೆ, ಐಸ್‌ಕ್ರೀಮ್, ಬಸ್, ತಿಂಡಿ-ತಿನಿಸುಗಳು, ಸ್ನೇಹಿತರು, ಆಟ. (ಒಂದೇ ಪದವನ್ನು ಎಷ್ಟು ಬಾರಿ ಬೇಕಾದರೂ ಬಳಸಬಹುದು ಹಾಗೂ ಮಕ್ಕಳೇ ಕಥೆಗೆ ಸೂಕ್ತ ಶೀರ್ಷಿಕೆ ನೀಡಬೇಕು.) | 27/04/2020 | 6 ರಿಂದ 12ವರ್ಷ |
| | ನೀಡಿರುವ ಪದಗಳನ್ನು ಬಳಸಿ ಎರಡು ಪುಟ ಕಾಲ್ಪನಿಕ ಕಥೆ ಬರೆಯುವುದು – ಗೋವಿಂದ, ಮೇರಿ, ರಾಜು, ಅಮೂಲ್ಯ, ರಮ್ಯ, ಆಯುಷಾ, ಮನೆ, ಸಂತೆ, ಆಟದ ಮೈದಾನ, ಶಾಲೆ, ಕೋವಿಡ್-19 ಸೋಂಕು, ಸುರಕ್ಷತೆ, ಹ್ಯಾಂಡ್ ವಾಷ್, ಕರ್ಚೀಫ್, ಸಾಮಾಜಿಕ ಅಂತರ, ರೋಗದಿಂದ ದೂರ, ಹಬ್ಬ, ಆರೋಗ್ಯ, ಸಂತೋಷ (ಒಂದೇ ಪದವನ್ನು ಎಷ್ಟು ಬಾರಿ ಬೇಕಾದರೂ ಬಳಸಬಹುದು ಹಾಗೂ ಮಕ್ಕಳೇ ಕಥೆಗೆ ಸೂಕ್ತ ಶೀರ್ಷಿಕೆ ನೀಡಬೇಕು.) | | 13 ರಿಂದ 18ವರ್ಷ |
| 8 | ಕವನ ಬರೆಯುವುದು(ವಿಷಯ: ಹೂವು, ಗಿಳಿ, ನವಿಲು, ನಾಯಿಮರಿ. ಇವುಗಳಲ್ಲಿ ಯಾವುದಾದರೂ ಒಂದು ವಿಷಯ ಆಯ್ಕೆ ಮಾಡಿಕೊಳ್ಳುವುದು) | 29/4/2020 | 6 ರಿಂದ 12ವರ್ಷ |
| | ಕವನ ಬರೆಯುವುದು (ವಿಷಯ: ಕೋವಿಡ್-19, ನದಿಗಳು, ಹೂವುಗಳು, ವಸಂತ ಕಾಲ.ಇವುಗಳಲ್ಲಿ ಯಾವುದಾದರೂ ಒಂದು ವಿಷಯ ಆಯ್ಕೆ ಮಾಡಿಕೊಳ್ಳುವುದು) | | 13 ರಿಂದ 18ವರ್ಷ |
| 9 | ಹಾಡು ಹಾಡುವುದು: ಭಾವಗೀತೆ/ಚಿತ್ರಗೀತೆ/ಜಾನಪದಗೀತೆ/ದೇಶಭಕ್ತಿಗೀತೆ (ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು) | 30/04/2020 | 6 ರಿಂದ 12ವರ್ಷ |
| | | | 13 ರಿಂದ 18ವರ್ಷ |

REDMI NOTE 8
AI QUAD CAMERA